**ಎಫ್ ಡಿ ಪಿ 28/2024 ಆರ್ ಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 06.08.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ 1 ನೇ ಎದುರುದಾರರ ಪರ ಶ್ರೀಮತಿ ಎಲ್ ವಿ ವಕೀಲರಿಂದಃ**

ಇಂದು ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದವರು ಕಿರಣ್ ಕುಮಾರ್ ಮತ್ತು ಅವರು ಈಗ ನ್ಯಾಯಾಲಯದಲ್ಲಿ ಇದ್ದಾರೆ ಎಂದರೆ ಸರಿ. ಪ್ರತಿ ಬಾರಿಯೂ ಅವರೇ ನನ್ನನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬರುತ್ತಾರೆ ಎಂದರೆ ಸರಿ. ಬೋರಮ್ಮನ ಮಕ್ಕಳು ಈ ದಾವೆಯಲ್ಲಿ ಪಕ್ಷಕಾರರಲ್ಲ ಎಂದರೆ ಸರಿ. ನಮ್ಮ ತಂದೆ ಗವೀಗೌಡರ ಹೆಸರಿನಲ್ಲಿ ಆಸ್ತಿಗಳು ಇರುವ ಬಗ್ಗೆ ಕೆಲವು ದಾಖಲೆಗಳನ್ನು ಕೊಟ್ಟಿದ್ದೇವೆ, ಇನ್ನು ಕೆಲವು ದಾಖಲೆಗಳನ್ನು ಕೊಡುತ್ತೇವೆ. ಆಸ್ತಿಗಳ ವಿವರಣೆ ಮರೆತಿದ್ದೇನೆ. ವಂಶವೃಕ್ಷವನ್ನು ಕಿರಣ್ ಕುಮಾರ್ ತಯಾರಿಸಿಕೊಂಡು ಬಂದಿದ್ದಾನೆ. ದಾವಾ ಆಸ್ತಿಗಳು ನಮ್ಮ ತಂದೆ ಗವೀಗೌಡರಿಗೆ ಸೇರದೆ ಇದ್ದರೂ ಸಹ ಕಿರಣ್ ಕುಮಾರ್ ಮಾತು ಕೇಳಿಕೊಂಡು ವಿನಾಕಾರಣ ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯ ಆಸ್ತಿಯಲ್ಲಿ ಪಾಲು ಕೇಳುತ್ತಿದ್ದೇನೆ. ದಾವಾ ಆಸ್ತಿಗಳು ನನ್ನ ತಂದೆಗೆ ಸೇರಿವೆ ಎಂದು ತೋರಿಸಲು ಏನು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲದೆ ಇರುವ ಕಾರಣ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಿರಣ್ ಕುಮಾರ್ ಮಾತು ಕೇಳಿಕೊಂಡು ನ್ಯಾಯಾಲಯಕ್ಕೆ ಬಂದಿದ್ದೇನೆಯೇ ಹೊರತು ನಮ್ಮ ತಂದೆಯ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳೆಲ್ಲವೂ ಸಿದ್ದೇಗೌಡರ ಸ್ವಯಾರ್ಜಿತವೇ ಹೊರತು ನನ್ನ ತಂದೆಯ ಆಸ್ತಿಗಳಲ್ಲವಾದ ಕಾರಣ ನನಗೆ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಂದೆಯ ಆಸ್ತಿಗಳು ಎಂದು ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ.

ನನಗೆ ಮೂರು ಜನ ಹೆಣ್ಣು ಮಕ್ಕಳು, ಎರಡು ಗಂಡು ಮಕ್ಕಳು. ನನ್ನ ಗಂಡನ ಹೆಸರು ನಿಂಗೇಗೌಡ. ನಮಗೆ ಒಟ್ಟು 4 ಎಕರೆ ಜಮೀನು ಇದೆ. ನನ್ನ ಒಬ್ಬ ಮಗ ಕೆಲಸ ಮಾಡುತ್ತಿದ್ದು ಇನ್ನೊಬ್ಬ ಮಗ ವ್ಯವಸಾಯ ಮಾಡುತ್ತಾನೆ. ಮೂರು ಜನ ಹೆಣ್ಣು ಮಕ್ಕಳ ಪೈಕಿ ಒಬ್ಬಳು ತೀರಿಕೊಂಡಿದ್ದಳು. ಇನ್ನು ಉಳಿದ ಇಬ್ಬರು ಹೆಣ್ಣು ಮಕ್ಕಳಿಗೆ ಮದುವೆಯಾಗಿದೆ. ನನ್ನ ಮಕ್ಕಳೆಲ್ಲರೂ ಚೆನ್ನಾಗಿ ಇದ್ದಾರೆ. ನಾನು ಮತ್ತು ಕಿರಣ್ ಕುಮಾರ್ ಅಷ್ಟೇನು ಚೆನ್ನಾಗಿಲ್ಲ, ಆಗಾಗ ಬಂದು ಹೋಗುತ್ತಾರೆ. 1 ನೇ ಎದುರುದಾರ ನಾಗೇಗೌಡ ನನ್ನ ಜೊತೆ ಅಷ್ಟೇನು ಚೆನ್ನಾಗಿಲ್ಲ. ಕಿರಣ್ ಕುಮಾರ್ ರವರ ತಂದೆಯ ಹೆಸರು ಬೋರೇಗೌಡ. ನಾನು ಮತ್ತು ಕಿರಣ್ ಕುಮಾರ್ ಚೆನ್ನಾಗಿದ್ದು ನನಗೆ ಭಾಗಾಂಶ ಬೇಡವಾಗಿದ್ದರೂ ಕಿರಣ್ ಕುಮಾರ್ ಗೆ ಸಹಾಯ ಮಾಡಲು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ ಕಾಲಾವಕಾಶ ನೀಡಲಾಯಿತು.</u>**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**